## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ಇವರು ನಿಯಮ 330ಎ ರಡಿ ಮಂಡಿಸಿರುವ ಸಾರ್ವಜನಿಕ ಮಹತ್ವದ ಸೂಚನೆಗೆ ಸರ್ಕಾರದ ಹೇಳಿಕೆ.

**ಸೂಚನೆ:-**

1964 ಕರ್ನಾಟಕ ಭೂ ಕಂದಾಯ ಕಾಯ್ದೆ, ತಿದ್ದುಪಡಿ ಅನ್ವಯ ಸರ್ಕಾರಿ ಕಂದಾಯ ಪ್ರದೇಶದಲ್ಲಿ ಭೂ ಮಂಜೂರಾತಿಗೆ ಅವಕಾಶವಿದ್ದು, 1991, 1998 ಮತ್ತು 2017ರಲ್ಲಿ ಬಗರ್ ಹುಕುಂ ಸಾಗುವಳಿ ಮಂಜೂರಾತಿ ಕುರಿತಂತೆ ಕ್ರಮವಾಗಿ ಫಾರಂ-50, 53 ಮತ್ತು 57ರಲ್ಲಿ ಸಾಗುವಳಿದಾರರಿಂದ ಅರ್ಜಿ ಸ್ವೀಕರಿಸಿದೆ. ಅಕ್ರಮ-ಸಕ್ರಮ ಮನೆ ನಿವೇಶನ ಮಂಜೂರಾತಿಗಾಗಿ 2002, 2014 ಮತ್ತು 2022ರಲ್ಲಿ ಪಟ್ಟಣ ಪ್ರದೇಶದಲ್ಲಿ 94-ಸಿ ಮತ್ತು ಗ್ರಾಮೀಣ ಪ್ರದೇಶದಲ್ಲಿ 94-ಸಿಸಿ ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಫಾರಂ-53ರಡಿಯಲ್ಲಿ ವಿಶೇಷ ಹಕ್ಕು ಪ್ರದೇಶದಲ್ಲಿ ಅವಕಾಶವಿತ್ತು. 1998 ರಿಂದ 2008ರವರೆಗೆ ವಿಶೇಷ ಹಕ್ಕುಳ್ಳ ಪ್ರದೇಶದಲ್ಲಿ ಭೂ ಮಂಜೂರಾತಿ ಮಾಡಲಾಗಿದೆ. ಆದರೆ, 2010ರಲ್ಲಿ ಮೇ 3 ರಂದು ಕಂದಾಯ ಇಲಾಖೆ ಕಾರ್ಯದರ್ಶಿ ತಾತ್ಕಾಲಿಕ ಸುತ್ತೋಲೆ ಆದೇಶದನ್ವಯ ಗೋಮಾಳ ಹೊರತುಪಡಿಸಿ ವಿಶೇಷ ಹಕ್ಕುಳ್ಳ ಪ್ರದೇಶದ ಜಮೀನಿನ ಮಂಜೂರಾತಿಗೆ ನಿರ್ಬಂಧ ಹೇರಲಾಗಿದೆ. ಅಂದಿನಿಂದ ಈದಿನದವರೆಗೂ ಅನುಷ್ಠಾನದಲ್ಲಿದೆ. ಇದರಿಂದಾಗಿ ರೈತರ ವಿಶೇಷ ಹಕ್ಕಿನ ವ್ಯಾಪ್ತಿಯ ವರ್ಗೀಕೃತ ಕಂದಾಯ ಭೂ ಮಂಜೂರಾತಿ ಸ್ಥಗಿತಗೊಂಡಿದೆ. ಕಂದಾಯ ಭೂ ಪ್ರದೇಶದ ಈವರೆಗೂ ವಿಭಜನೆಗೊಳ್ಳದ ಕಾರಣ ಭೂ ಮಂಜೂರು ಸಾಧ್ಯವಿಲ್ಲವೆಂದು ಕಂದಾಯ ಇಲಾಖೆ ವಾದಿಸುತ್ತಿದೆ. ಸರ್ಕಾರ ಬಿನ್ನದೋರಣೆ ಮತ್ತು ಭೂ ಮಂಜೂರಾತಿಗೆ ತೊಡಕಾದ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದೇ ಇರುವುದರಿಂದ ಅಕ್ರಮ-ಸಕ್ರಮದಡಿ ಅರ್ಜಿ ಸಲ್ಲಿಸಿದ ಅರ್ಜಿದಾರರು ಹಲವಾರು ವರ್ಷಗಳಿಂದ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

ಈ ವಿಷಯದ ಬಗ್ಗೆ ವಿಜಯತರಂಗ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಯನ್ನು ಲಗತ್ತಿಸಿದ್ದು, ಈ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿರುತ್ತಾರೆ.

**ಹೇಳಿಕೆ:-**

ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮಾಡುತ್ತಿರುವ ಸಾಗವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ, ಕಲಂ 94-ಬಿ ಮತ್ತು ಕಲಂ 94-ಎ(4)ರಡಿ ಕ್ರಮವಾಗಿ ನಮೂನೆ-50, 53 ಮತ್ತು 57ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

- ಗ್ರಾಮಾಂತರ ಮತ್ತುನಗರ ಪ್ರದೇಶದಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಸಿ ಹಾಗೂ 94-ಸಿಸಿ ರಡಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

- ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ ಪ್ರಕರಣದಲ್ಲಿ ಹೇಳಿರುವುದಾವುದು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ 79ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಪರಾಮರ್ಶಿಸಿದ ಅರಣ್ಯ ಭೂಮಿಗಳು, ಪ್ಲಾಂಟೇಷನ್ ಭೂಮಿಗಳು ಅಥವಾ ಭೂಮಿಗಳಿಗೆ ಅನ್ವಯಿಸತಕ್ಕದ್ದಲ್ಲ ಎಂದು ತಿಳಿಸಲಾಗಿದೆ.

- ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94 ಬಿ (3) ರಲ್ಲಿ 94-ಬಿ ಪ್ರಕರಣದಲ್ಲಿರುವುದಾವುದು ಅರಣ್ಯ ಭೂಮಿ ಎಂದು ವರ್ಗೀಕೃತವಾದ 79(2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಭೂಮಿಯನ್ನು ಹೊರತುಪಡಿಸಿ ಇತರ ಅರಣ್ಯ ಭೂಮಿಗೆ ಅನ್ವಯಿಸತಕ್ಕದ್ದಲ್ಲ ಎಂದು ತಿಳಿಸಲಾಗಿದೆ.

- ಸರ್ಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ 101 ಎಲ್‌ಜಿಪಿ 2005, ದಿನಾಂಕ:11.02.2010ರ ಸುತ್ತೋಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 79(2)ರಲ್ಲಿನ ವಿಶೇಷ ಹಕ್ಕಿನ ಜಮೀನುಗಳಾದ ಕುಮ್ಕಿ, ಕಾಣೆ, ಬಾಣೆ, ಸೊಪ್ಪಿನ ಬೆಟ್ಟ, ಜಮ್ಮ, ಬಾನೆ ಜಮೀನುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ.

"In view of the provision of section 79 of the Karnataka Land Revenue Act 1964 and ruling reported in 1971 Mysore law journal short note 125 Division Bench in case of Padma Shedthi -Vs Mysore Revenue Appellate Tribunal, the Hon'ble High Court of Karnataka held that Kan, Bena, Betta, Soppinbetta, Jamma Bane, Jamma Malai are the Forest lands."

"The persons having privileges of these lands would be having limited rights of enjoyment in respect of the supply of leaf manure firewood and timber required for agricultural and domestic purpose of cultivator. Such persons cannot exercise their proprietary rights over such lands as they are not the owners of such lands. These lands are Forest lands.

"such persons have no rights to alienate, sell or otherwise exercise the proprietary rights for such lands".

But as per proviso to section 94(B)(1) of Karnataka Land Revenue Act 1964, Where the prior approval of the Central Govt. under section 2 of the Forest Conservation Act 1980 (Central Act 69 of 1980) is required for grant of any land under section 94(B), such grants shall not be made without such approval."

- ಅದರಂತೆ, ಕುಮ್ಕಿ ಹಾಗೂ ಇತರೆ ವಿಶೇಷ ಸವಲತ್ತುಗಳ ಜಮೀನುಗಳ ಸೀಮಿತ ಹಕ್ಕು ಹಾಗೂ ವಿಶೇಷ ಹಕ್ಕುಗಳ ಬಗ್ಗೆ ಕಾನೂನು ಇಲಾಖೆ ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅನುಮತಿ ಪಡೆಯದೆ ಇಂತಹ ವಿಶೇಷ ಸವಲತ್ತುಗಳುಳ್ಳ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕೆ ಹೊರತುಪಡಿಸಿ, ವಿರಹಿತಗೊಳಿಸತಕ್ಕದ್ದಲ್ಲ ಎಂದು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟೀಕರಣ ನೀಡಲಾಗಿದೆ.

- ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 101 ಎಲ್‌ಜಿಎ 2005, ದಿನಾಂಕ:03.05.2010ರ ಸುತ್ತೋಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 79(2)ರಲ್ಲಿನ ವಿಶೇಷ ಹಕ್ಕಿನ ಜಮೀನುಗಳಾದ ಕುಮ್ಕಿ, ಕಾಣೆ, ಬಾಣೆ, ಸೊಪ್ಪಿನ ಬೆಟ್ಟ, ಜಮ್ಮ, ಬಾನೆ ಜಮೀನುಗಳಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ದಿನಾಂಕ:11.02.2010ರ ಸೂಚನೆಗಳನ್ನು ಅನುಷ್ಠಾನಗೊಳಿಸದಂತೆ ಸ್ಥಗಿತಗೊಳಿಸಲಾಗಿದೆ.

- ಮುಂದುವರೆದು, ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 79(2)ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕುಮ್ಕಿ ಭೂಮಿಗಳು, ಬಾಣೆ ಭೂಮಿಗಳು ಮತ್ತು ಕಾಣೆ ಭೂಮಿಗಳು, ಉತ್ತರ ಕನ್ನಡ ಜಿಲ್ಲೆಯಲ್ಲಿನ ಬೆಟ್ಟ ಭೂಮಿಗಳು ಮತ್ತು ಹಾಡಿ ಭೂಮಿಗಳು, ಮೈಸೂರು ಪ್ರದೇಶದಲ್ಲಿನ ಕಾನು ಮತ್ತು ಸೊಪ್ಪಿನ ಬೆಟ್ಟ ಭೂಮಿಗಳು, ಕೊಡಗಿನ ಜಮ್ಮಾ ಮತ್ತು ಬಾಣೆ ಭೂಮಿಗಳು ಮತ್ತು ಹೈದರಾಬಾದ್

ಪ್ರದೇಶದಲ್ಲಿನ (ಮೋಟಸ್ಥಲ್ ತರಿ ಭೂಮಿಗಳು) (Motasthal wet lands) ಇವುಗಳ ಬಗೆಗಿನ ವಿಶೇಷಾಧಿಕಾರಗಳು ಮುಂದುವರಿಯತಕ್ಕದ್ದು ಎಂದು ತಿಳಿಸಲಾಗಿದೆ.

- ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಜಮೀನುಗಳನ್ನು ಮಂಜೂರು / ಗುತ್ತಿಗೆ ನೀಡುವ ವಿಷಯವು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

**(ಆರ್‌ಡಿ 92 ಎಲ್‌ಜಿಕ್ಯೂ 2023)**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು